◆ ಜಾಝ್ ಸಂಗೀತದ ಬಗ್ಗೆ ಏನು ಹೇಳುವಿರಿ? ಅದು ನಿಮ್ಮ ಕೆಲಸದಲ್ಲಿ ನೆರವಾಗಿದೆಯೇ?

ಹದಿನಾಲ್ಕು ವರ್ಷವಿದ್ದಾಗಿನಿಂದ ಜಾಝ್ ಸಂಗೀತವನ್ನು ಕೇಳುತ್ತಿದ್ದೇನೆ. ಸಂಗೀತ ಬಹಳ ಗಾಢಪ್ರಭಾವ ಬೀರುತ್ತದೆ. ಅದರ ಮಾಧುರ್ಯ, ಲಯ, ಭಾವಗಳು ಬರೆಯಲು ನನಗೆ ಸಹಾಯ ಮಾಡುತ್ತವೆ. ನನಗೆ ಸಂಗೀತಗಾರನಾಗುವ ಆಸೆಯಿತ್ತು. ಆದರೆ, ವಾದ್ಯಗಳನ್ನು ಚೆನ್ನಾಗಿ ನುಡಿಸಲು ಬರುವುದಿಲ್ಲ. ಹಾಗಾಗಿ, ಲೇಖಕನಾದೆ. ಬರೆಯುವುದು ಕೂಡ ಸಂಗೀತ ನುಡಿಸಿದಂತೆ. ಮೊದಲು ವಸ್ತುವನ್ನು ನುಡಿಸುತ್ತೇನೆ. ಆಮೇಲೆ ಅದನ್ನು ಸುಧಾರಿಸುತ್ತೇನೆ, ಆಮೇಲೆ ಅಂತ್ಯ ಕಂಡುಕೊಳ್ಳುತ್ತೇನೆ.

◆ ಸಾಂಪ್ರದಾಯಿಕ ಜಾಝ್ ಸಂಗೀತದಲ್ಲಿ ಎಲ್ಲಿಂದ ಶುರು ಮಾಡಿರುತ್ತಾರೋ ಅಲ್ಲಿಗೆ ಕೊನೆಯಲ್ಲಿ ಹಿಂತಿರುಗುತ್ತಾರೆ. ನೀವು ಹಾಗೆ ಮಾಡುವಿರಾ?

ಕೆಲವೊಮ್ಮೆ ಮಾಡುತ್ತೇನೆ. ಜಾಝ್ ನನಗೆ ಮನೋಲೋಕದೊಳಗಿನ ಪಯಣವಿದ್ದಂತೆ. ಬರವಣಿಗೆಗಿಂತ ಭಿನ್ನವಲ್ಲ.

◆ ಜಪಾನಿನಲ್ಲಿ ಕೋಬೆಯಲ್ಲಿ ಬೆಳೆದದ್ದು ನಿಮ್ಮ ಶೈಲಿಯನ್ನು ಕಂಡುಕೊಳ್ಳಲು ಹೇಗೆ ನೆರವಾಯಿತು?

ಕ್ಯೋಟೊದಲ್ಲಿನ ಜನರಿಗಿಂತ ಕೋಬೆಯಲ್ಲಿರುವವರು ವಿಚಿತ್ರ! ಅವರ ಊರಿನ ಸುತ್ತ ಬೆಟ್ಟಗಳಿವೆ. ಅದಕ್ಕೆ ಅವರ ಮನೋಭಾವ ಭಿನ್ನ.

◆ ನೀವು ಹುಟ್ಟಿದ್ದು ಕ್ಯೊಟೊದಲ್ಲಿ ಅಲ್ಲವೇ?

ಹೌದು. ನಾನು ಎರಡು ವರ್ಷದವನಿದ್ದಾಗ ಕೋಬೆಗೆ ಬಂದೆವು. ಕೋಬೆ ಬೆಟ್ಟಗಳ ಜೊತೆ ಸಮುದ್ರವನ್ನು ಹೊಂದಿದೆ. ನಂಗೆ ಟೊಕಿಯೊ ಇಷ್ಟವಾಗುವುದಿಲ್ಲ. ಅಲ್ಲಿರುವುದು ಇಷ್ಟವಿಲ್ಲ.

◆ ನೀವು ಅಲ್ಲೇ ಇರುವಿರಲ್ಲ!

ಇದ್ದೀನಿ, ಯಾಕೆಂದರೆ, ಇಲ್ಲಿ ಅಪರಿಚಿತನಂತೆ ಇರಬಹುದು. ನ್ಯೂಯಾರ್ಕಿನಲ್ಲೂ ಅಷ್ಟೇ, ಎಲ್ಲಿ ಬೇಕಾದರೂ ಹೋಗಬಹುದು. ಯಾರೂ ಗುರುತುಹಿಡಿಯುವುದಿಲ್ಲ. ರೈಲಿನಲ್ಲಿ ಹೋದರೂ ಯಾರೂ ಕಾಟ ಕೊಡುವುದಿಲ್ಲ. ಟೊಕಿಯೊದ ಸಣ್ಣ ಪಟ್ಟಣದಲ್ಲಿ ನಮ್ಮ ಮನೆಯಿದೆ. ಅಲ್ಲಿ ಎಲ್ಲರೂ ನನ್ನ ಗುರುತುಹಿಡಿಯುತ್ತಾರೆ. ವಾಕಿಂಗ್ ಹೋದಾಗಲೆಲ್ಲ ಜನ ಗುರುತುಹಿಡಿದುಬಿಡುತ್ತಾರೆ. ಕೆಲವೊಮ್ಮೆ ಮುಜುಗರವಾಗುತ್ತದೆ.

**ಜಾನ್ ರೇ**

ಇಂಗ್ಲಿಷ್ ಕಾದಂಬರಿಕಾರ. ‘The Right Hand of Sleep’ (2001), ‘Canaan’s Tongue’ (2005), ‘Lowboy’ (2009) ಈತನ ಪ್ರಕಟಿತ ಕೃತಿಗಳು.

**ಹೇಮಾ ಎಸ್.**

ಕನ್ನಡ ಉಪನ್ಯಾಸಕಿಯಾಗಿ ಕೆಲಸ ಮಾಡಿದ್ದಾರೆ. ಆಕಾಶವಾಣಿಯಲ್ಲಿ ಕೆಲಕಾಲ ಉದ್ಘೋಷಕಿಯಾಗಿದ್ದರು. ಪ್ರಕಟಿತ ಕೃತಿಗಳು: ‘ಹೆಸರಿಲ್ಲದ ಹೂ’ (ಅಬ್ಬಾಸ್ ಕಿರಸ್ತೊಮಿ ಕವನಗಳ ಅನುವಾದ) ಮತ್ತು ‘ಉರಿವ ಬನದ ಕೋಗಿಲೆಗಳು’ (ಅನುವಾದಿತ ಲೇಖನಗಳು)